**ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ,**

**ಅರಕಲಗೂಡು.**

**ಅಸಲು ದಾವಾ ಸಂಖ್ಯೆ: 20/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | :- | ಚಂದ್ರಶೆಟ್ಟಿ ಎಂ. | ಸಿ.ಡಬ್ಲ್ಯೂ: 1 |
| ತಂದೆಯ ಹೆಸರು | :- | ಮಲ್ಲಪ್ಪ | |
| ವಯಸ್ಸು | :- | 60 ವರ್ಷ | ಪ್ರಮಾಣೀಕರಿಸಿದ ದಿನಾಂಕ |
| ಉದ್ಯೋಗ | :- | ದ್ವಿ.ದ.ಸ., ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ, ಹೇಮಾವತಿ ಜಲಾಶಯ ಯೋಜನೆ, ಹಾಸನ. | 19-12-2023 |
| ವಾಸಸ್ಥಳ | :- | ಹಾಸನ | |

ಮುಖ್ಯ ವಿಚಾರಣೆಃ

ನಾನು ಇಂದು ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಸಮನ್ಸ್ ಬಂದ ಮೇರೆಗೆ ಹಾಜರಾಗಿರುತ್ತೇನೆ. ನ್ಯಾಯಾಲಯದಿಂದ ದಾಖಲಾತಿಗಳನ್ನು ಹಾಜರುಪಡಿಸಲು ನಿರ್ದೇಶನ ಬಂದಿದ್ದು ವಿಶೇಷ ಭೂಸ್ವಾಧೀನಾಧಿಕಾರಿಯವರು ನನ್ನನ್ನು ಈ ದಿವಸ ದಾಖಲಾತಿಗಳೊಂದಿಗೆ ಹಾಜರಾಗಲು ನಿಯೋಜಿಸಿದ್ದು ಆ ಪ್ರಕಾರವಾಗಿ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ನಿಶಾನೆ ಸಿ-1- ಸಾಕ್ಷಿ ನುಡಿಯಲು ನೀಡಿದ ಅಧಿಕಾರ ಪತ್ರ

ನಿಶಾನೆ ಸಿ-2- ಎಂ.ಎಫ್.ಸಿ. 'ಡಿ'ಫಾರಂನ ದೃಢೀಕೃತ ಪ್ರತಿ

ನಿಶಾನೆ ಸಿ-3- ವೈಯಕ್ತಿಕ ಅವಾರ್ಡಿನ ಆರ್ಡರಿನ ದೃಢೀಕೃತ ಪ್ರತಿ

ನಿಶಾನೆ ಸಿ-4- ಫಾರಂ 'ಬಿ'ನ ದೃಢೀಕೃತ ಪ್ರತಿ ( ಸದರಿ ದಾಖಲಾತಿಯಲ್ಲಿ ಶಿವೇಗೌಡರವರ ಹೇಳಿಕೆ ಹಾಗೂ ವೀರಭದ್ರೇಗೌಡರವರ ಒಪ್ಪಿಗೆ ಪತ್ರ ಇರುತ್ತದೆ. )

ನಿಶಾನೆ ಸಿ-5- ಮುಚ್ಚಳಿಕಾ ಪತ್ರದ ದೃಢೀಕೃತ ಪ್ರತಿ

ನಿಶಾನೆ ಸಿ-6- ಫಾರಂ ಆಫ್ ರೆಫೆರೆನ್ಸ್ ಟು ದಿ ಕೋರ್ಟಿನ ದೃಢೀಕೃತ ಪ್ರತಿ

ನಿಶಾನೆ ಸಿ-7- ಇಂಡೆಕ್ಸಿನ ದೃಢೀಕೃತ ಪ್ರತಿ

ನಿಶಾನೆ ಸಿ-8- ಕಲಂ 18 ರ ಲ್ಯಾಂಡ್ ಅಕ್ವಿಸೇಷನ್ ಆಕ್ಟ್ ಅಡಿಯಲ್ಲಿ ಕಳುಹಿಸಿಕೊಟ್ಟಿರುವ ನ್ಯಾಯಾಲಯಕ್ಕೆ ರೆಫೆರೆನ್ಸಿನ ದೃಢೀಕೃತ ಪ್ರತಿ

ನಿಶಾನೆ ಸಿ-9- ತಹಶೀಲ್ದಾರ್ ಕಛೇರಿಯಿಂದ ದಿನಾಂಕಃ12-09-2012 ರಂದು ಕಳುಹಿಸಲಾಗಿರುವ ಹಿಂಬರಹದ ದೃಢೀಕೃತ ಪ್ರತಿ

ನಿಶಾನೆ ಸಿ-10- ದಿನಾಂಕಃ 22-07-2007 ರ ಗೆಜೆಟ್ ನೋಟಿಫಿಕೇಷನ್ನಿನ ದೃಢೀಕೃತ ಪ್ರತಿ

ನಿಶಾನೆ ಸಿ-11- ಜನರಲ್ ಅವಾರ್ಡಿನ ದೃಢೀಕೃತ ಪ್ರತಿ

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಎಂ.ಎನ್.ಆರ್. ವಕೀಲರಿಂದ

1. ನಿಶಾನೆ ಸಿ-4ರ ' ಬಿ ' ಫಾರಂನಲ್ಲಿ ವೀರಭದ್ರೇಗೌಡರವರು ಹಿಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳ ಸಮಕ್ಷಮ ಸಹಿಮಾಡಿರುತ್ತಾರೆ. ಆ ಸಂದರ್ಭದಲ್ಲಿ ಅವರು ರೇಷನ್ ಕಾರ್ಡ್ ಹಾಗೂ ಫೋಟೋಗಳನ್ನು ನೀಡಿರುತ್ತಾರೆ. ಅದು ವೀರಭದ್ರೇಗೌಡರವರ ಫೋಟೋ ಆಗಿರುತ್ತದೆ. ಶಿವೇಗೌಡರವರಿಗೆ ಪರಿಹಾರ ಪಾವತಿಸಿರುವ ಸಂದರ್ಭದಲ್ಲಿ ಚುನಾವಣಾ ಆಯೋಗದ ಗುರುತಿನ ಚೀಟಿ ನೀಡಿರುತ್ತಾರೆ. ವೀರಭದ್ರೇಗೌಡರವರು ಶಿವೇಗೌಡರವರಿಗೆ ಪರಿಹಾರವನ್ನು ಪಾವತಿ ಮಾಡಲು ತನ್ನದು ತಕರಾರು ಇಲ್ಲವೆಂದು ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿರುತ್ತಾರೆ.

ಪಾಟೀ ಸವಾಲುಃ

ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು.